o/c
Speed p.24

ಅತ್ಯಾಧ್ಯತೆ

# ಸರ್ವ ಶಿಕ್ಷಣ ಅಭಿಯಾನ

## ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01

ದಿನಾಂಕ : 17-07-09

ಸಂಖ್ಯೆ: ಹೆ.ಮ.ಶಿ/ಮಸ/ನಿ.ವೆ/2009-10

## ಸುತ್ತೋಲೆ

**ವಿಷಯ:** ಮಹಿಳಾ ಸಮಖ್ಯಾ, ಕರ್ನಾಟಕ ಸಂಸ್ಥೆಗೆ ನಿರ್ವಹಣಾ ವೆಚ್ಚದ ಅನುದಾನವನ್ನು ಜಿಲ್ಲಾ ಆಡಳಿತಾತ್ಮಕ ವೆಚ್ಚದಿಂದ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 03-07-2009 ರಂದು ಮಹಿಳಾ ಸಮಖ್ಯಾ ಸಂಬಂಧ ನಡೆದ ಸಭೆಯ ನಡವಳಿ.

*****

ಮೇಲಿನ ವಿಷಯ ಹಾಗೂ ಉಲ್ಲೇಖದನ್ವಯ, ಮಹಿಳಾ ಸಮಖ್ಯಾ, ಕರ್ನಾಟಕ ಸಂಸ್ಥೆಗೆ ಕೆ.ಜಿ.ಬಿ.ವಿ. ಶಾಲೆಗಳ ಬಗ್ಗೆ ಅಗತ್ಯವಾದ ನಿರ್ವಹಣಾ ವೆಚ್ಚಕ್ಕೆ ಸಂಬಂಧಿಸಿದ ಅನುದಾನವನ್ನು ಮಹಿಳಾ ಸಮಖ್ಯಾ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳ ಜಿಲ್ಲಾ ಆಡಳಿತಾತ್ಮಕ ವೆಚ್ಚದಿಂದ ಬಿಡುಗಡೆ ಮಾಡಲು ಸೂಚಿಸಿದೆ. ಸಂಬಂಧಿಸಿದ ಜಿಲ್ಲೆಗಳು ಈ ಕೆಳಗೆ ಸೂಚಿಸಿರುವ ಅನುದಾನವನ್ನು ಬ್ಯಾಂಕ್ ಹುಂಡಿ ರೂಪದಲ್ಲಿ **ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ-ಕರ್ನಾಟಕ, ಬೆಂಗಳೂರು.** ಇವರಿಗೆ ತಕ್ಷಣ ಕಳುಹಿಸಲು ತಿಳಿಸಿದೆ. ಈ ಸಂಬಂಧ, ಕ್ರಮ ಕೈಗೊಂಡ ವರದಿಯನ್ನು **25-07-2009** ರೊಳಗೆ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

| ಕ್ರ. ಸಂ | ಜಿಲ್ಲೆ | ಮಂಜೂರಾಗಿರುವ ಜಿಲ್ಲಾ ಆಡಳತಾತ್ಮಕ ವೆಚ್ಚದ ಮೊತ್ತ (ಲಕ್ಷಗಳಲ್ಲಿ) | ಮಹಿಳಾ ಸಮಖ್ಯಾ-ಕರ್ನಾಟಕಕ್ಕೆ ಬಿಡುಗಡೆ ಮಾಡಬೇಕಾದ ಮೊತ್ತ (ಲಕ್ಷಗಳಲ್ಲಿ) |
|---|---|---|---|
| 01 | ಬಾಗಲಕೋಟೆ | 127.301 | 2.42 |
| 02 | ಬಳ್ಳಾರಿ | 151.083 | 2.87 |
| 03 | ಬೀದರ್ | 135.721 | 2.58 |
| 04 | ಬಿಜಾಪುರ | 164.955 | 3.14 |
| 05 | ಗುಲ್ಬರ್ಗಾ | 226.074 | 4.30 |
| 06 | ಕೊಪ್ಪಳ | 127.700 | 2.43 |
| 07 | ರಾಯಚೂರು | 118.848 | 2.26 |
| | ಒಟ್ಟು | 1051.682 | 20.00 |

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಇವರಿಗೆ- ಅಗತ್ಯ ಕ್ರಮಕ್ಕಾಗಿ**

- ಡಿಡಿಪಿಐ ಮತ್ತು ಡಿವೈಪಿಸಿ, ಬಾಗಲಕೋಟೆ, ಬಳ್ಳಾರಿ, ಬೀದರ್, ರಾಯಚೂರು, ಗುಲ್ಬರ್ಗಾ, ಕೊಪ್ಪಳ, ರಾಯಚೂರು, ಬಿಜಾಪುರ

**ಮಾಹಿತಿಗಾಗಿ**

- ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ ಇವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.
- ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ-ಕರ್ನಾಟಕ, ಜಯನಗರ, ಬೆಂಗಳೂರು

ಸರ್ವ ಶಿಕ್ಷಣ ಅಭಿಯಾನ
ರವಾನಿಸಿದ ಸಂ: 1250
ದಿನಾಂಕ: 18/7/09
ಸಹಿ: